RNU AIR DHARWAD

NOVEMBER 08, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಎರ್ನಾಕುಲಂ ಹಾಗೂ ಕೆ.ಎಸ್.ಆರ್–ಬೆಂಗಳೂರು ಮಧ್ಯೆ ಸಂಚರಿಸಲಿರುವ, ವಂದೇ ಭಾರತ ಎಕ್ಸ್‌ಪ್ರೆಸ್ ರೈಲು ಸೇರಿದಂತೆ, 4 ಹೊಸ ವಂದೇ ಭಾರತ ರೈಲುಗಳಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಉತ್ತರಪ್ರದೇಶದ ವಾರಾಣಸಿಯಲ್ಲಿ, ಇಂದು ಬೆಳಗ್ಗೆ ಚಾಲನೆ ನೀಡಿದರು.**

**ಈ ಸಂದರ್ಭದಲ್ಲಿ ಮಾತನಾಡಿದ ಅವರು, ಆತ್ಮ ನಿರ್ಭರ ಭಾರತ ಪರಿಕಲ್ಪನೆಗೆ ಒತ್ತು ನೀಡಿದ್ದಾಗಿ ತಿಳಿಸಿದರು.**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 50 ಸೆಕೆಂದುಗಳು**

<><><>

**ಬೆಂಗಳೂರಿನ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೇಲ್ವೆ ನಿಲ್ದಾಣದಲ್ಲಿ, ನೂತನ ವಂದೇ ಭಾರತ ಎಕ್ಸ್‌ಪ್ರೆಸ್ ರೈಲಿನ ಸ್ವಾಗತ ಸಮಾರಂಭ, ಇಂದು ಸಂಜೆ 5 ಗಂಟೆಗೆ ಜರುಗಲಿದೆ.**

<><><>

**ಸ್ವಚ್ಛ ಮತ್ತು ಸ್ವಸ್ಥ ಭಾರತಕ್ಕಾಗಿ, ಎಲ್ಲರೂ ಒಟ್ಟಾಗಿ ಕೆಲಸವನ್ನು, ಮುಂದುವರಿಸೋಣ ಎಂದು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ, ಎಲ್. ಮುರುಗನ್ ತಿಳಿಸಿದ್ದಾರೆ. ಹೊಸ ದಿಲ್ಲಿಯ, ಸೂಚನಾ ಭವನದಲ್ಲಿ, 5ನೇ ಆವೃತ್ತಿಯ, ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಿ, ಸ್ವಚ್ಛ, ವಿಕಸಿತ, ಮತ್ತು ಶ್ರೇ ಃ ಭಾರತದ ಕಡೆಗೆ ಸಾಮೂಹಿಕ ಸಂಕಲ್ಪವನ್ನು ಪುನರುಚ್ಚರಿಸಿದರು. ಬಳಿಕ, ವೇವ್ಸ್ ಬಜಾರ್ ಕಚೇರಿಯನ್ನು ಸಹ ಉದ್ಘಾಟಿಸಿದರು.**

<><><>

**ದಾಸ ಸಾಹಿತ್ಯಕ್ಕೆ, ವಿಶಿ ್ಟ ಮೆರಗು ತಂದ, ಕೀರ್ತನಕಾರರಾಗಿ, ತತ್ವಜ್ಞಾನಿಯಾಗಿ, ಸಂತರಾಗಿ, ದಾರ್ಶನಿಕರಾಗಿ, ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಗೆ, ಸಂಗೀತ ಕ್ಷೇತ್ರಕ್ಕೆ, ಅನನ್ಯ ಕೊಡುಗೆ ನೀಡಿದ, ಸಂತ ಶ್ರೇ ಃ, ಶ್ರೀ ಕನಕದಾಸರ ಜಯಂತಿ ಇಂದು. ಕೇಂದ್ರ ಸಚಿವ, ಪ್ರಲ್ಹಾದ ಜೋಶಿ, ಸಂತ ಕನಕದಾಸರ ಸ್ಮೃತಿಗೆ, ಗೌರವ ಪೂರ್ವಕ ನಮನ ಸಲ್ಲಿಸಿದ್ದಾಗಿ, ತಿಳಿಸಿದ್ದಾರೆ.**

<><><>

**ಬಳ್ಳಾರಿ ಜಿಲ್ಲೆ, ಸಿರುಗುಪ್ಪ ಹಾಗೂ ಕಂಪ್ಲಿ ಪಟ್ಟಣದ ಗ್ಯಾರೇಜ್, ಮೆಕ್ಯಾನಿಕ್ ಶಾಪ್, ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಳ ಹಾಗೂ ಬೇಕರಿ ಉದ್ದಿಮೆಗಳ ಮೇಲೆ, ಬಾಲ ಹಾಗೂ ಕಿಶೋರ ಕಾರ್ಮಿಕ ರಕ್ಷಣೆ ಕಾರ್ಯಾಚರಣೆ ಪಡೆ ಸಮಿತಿ, ದಾಳಿ**

ನಡೆಸಿ, 6 ಜನ ಬಾಲ ಹಾಗೂ ಕಿಶೋರ ಕಾರ್ಮಿಕ ಮಕ್ಕಳನ್ನು ರಕ್ಷಿಸಿದೆ. ಮಕ್ಕಳ ಪುನರ್ವಸತಿಗಾಗಿ, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಲಾಗಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

ವಿಜಯನಗರ ಜಿಲ್ಲೆ, ಕೂಡ್ಲಿಗಿ ತಾಲೂಕಿನ, 74 ಕೆರೆಗಳ ನೀರು ತುಂಬಿಸುವ ಯೋಜನೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಚಾಲನೆ ನೀಡಲಿದ್ದಾರೆ. ವಿವಿಧ ಯೋಜನೆಗಳ ಫಲಾನುಭವಿಗಳಿಗೆ, ಹಲವು ಸವಲತ್ತುಗಳನ್ನು ವಿತರಿಸಲಿದ್ದಾರೆ.

<><><>

ನಾಗರಹೊಳೆ ಹಾಗೂ ಬಂಡೀಪುರ ಅಭಯಾರಣ್ಯಗಳಲ್ಲಿ, ಹುಲಿ ದಾಳಿಯಿಂದ ಮೂರು ಜನರ ಸಾವು ಸಂಭವಿಸಿದ ಹಿನ್ನೆಲೆ, ಮುಂದಿನ ಆದೇಶದ ವರೆಗೆ, ಎರಡೂ ಪ್ರದೇಶಗಳ, ಸಫಾರಿ ಹಾಗೂ ಚಾರಣ ಚಟುವಟಿಕೆಗಳನ್ನು ನಿಲ್ಲಿಸಿ ಸಫಾರಿ ಸಿಬ್ಬಂದಿಯನ್ನು, ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜಿಸಲು, ಅಧಿಕಾರಿಗಳಿಗೆ ಸೂಚಿಸಿದ್ದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಕೃತಕ ಬುದ್ಧಿಮತ್ತೆ ಕ್ಷೇತ್ರದ, ಬುರ್ಕಾನ್ ಸಮೂಹ, ರಾಜ್ಯದಲ್ಲಿ, ಸಾವಿರದ ಐನೂರು ಕೋಟಿ ರೂಪಾಯಿ ಹೂಡಿಕೆಯೊಂದಿಗೆ, 'ಎ.ಐ. ಸರ್ವರ್' ಉತ್ಪಾದನಾ ಘಟಕ ಸ್ಥಾಪಿಸಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಕೃತಕ ಬುದ್ಧಿಮತ್ತೆಯ ಹೊಸ ಯುಗಕ್ಕೆ ಕಾಲಿಟ್ಟ ಕರ್ನಾಟಕ, ದೇಶದ ತಂತ್ರಜ್ಞಾನ ನಕ್ಷೆಯಲ್ಲಿ, ಮತ್ತೊಂದು ಮೈಲಿಗಲ್ಲು ಸಾಧಿಸಿದ್ದು, ಸಾವಿರಾರು ಯುವಜನರಿಗೆ, ಹೊಸ ಉದ್ಯೋಗಾವಕಾಶ ಲಭಿಸಲಿದೆ ಎಂದಿದ್ದಾರೆ.

ಹರ್ಷ/ಹೊಂಗಲ್/ಎಕ್ಸ್ ಖಾತೆ

<><><>

ಕಲಬುರಗಿ ಜಿಲ್ಲೆ, ಚಿತ್ತಾಪುರ ಕ್ಷೇತ್ರ, ಬೌದ್ಧ ಚಿಂತನೆಗಳ ಶ್ರೀಮಂತ ಪರಂಪರೆಯ, ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಸಾಮ್ರಾಟ ಅಶೋಕನ ಆಳ್ವಿಕೆ ಕಾಲದಲ್ಲಿ ನಿರ್ಮಾಣವಾದ, ಮಹಾಚೈತ್ಯ, ಸನ್ನತಿ–ಕನಗನಹಳ್ಳಿ ಸ್ತೂಪ, ನಮ್ಮ ಹೆಮ್ಮೆಯ ಚರಿತ್ರೆಯ, ಹೆಗ್ಗುರುತುಗಳಲ್ಲಿ ಒಂದು. ಈ ಬೌದ್ಧ ತಾಣದ ಹಿಂದಿನ ವೈಭವವನ್ನು, ರಾಜ್ಯ ಸರ್ಕಾರ ಮರುಸ್ಥಾಪಿಸಲಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಭಾರತೀಯ ಜನತಾ ಪಕ್ಷದ, ಅಗ್ರಗಣ್ಯ ನೇತಾರ, ಮಾಜಿ ಉಪ ಪ್ರಧಾನಮಂತ್ರಿ, ಭಾರತ ರತ್ನ, ಎಲ್.ಕೆ. ಅಡ್ವಾಣಿ ಅವರ ಜನ್ಮದಿನವಿಂದು. ಪ್ರಧಾನಮಂತ್ರಿ ನರೇಂದ್ರ ಮೋದಿ, ವಿಧಾನಸಭೆ ವಿಪಕ್ಷ ನಾಯಕ, ಆರ್. ಅಶೋಕ ಸೇರಿದಂತೆ ಅನೇಕ ಗಣ್ಯರು, ಶುಭಾಶಯ ಕೋರಿದ್ದಾರೆ.

<><><>

ಉಕ್ಕಿನ ಮನುಷ್ಯ, ಸರ್ದಾರ್ ವಲ್ಲಭ ಭಾಯಿ ಪಟೇಲರ, 150ನೇ ಜನ್ಮದಿನೋತ್ಸವದ ಸ್ಮರಣಾರ್ಥ, ಬರುವ 15 ರಂದು, ಬೆಂಗಳೂರಿನಲ್ಲಿ 'ಸರ್ದಾರ್@150 ಏಕತಾ ಪಾದಯಾತ್ರೆ' ಆಯೋಜಿಸಲಾಗಿದೆ ಎಂದು, ಕೇಂದ್ರದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಖಾತೆ ರಾಜ್ಯ ಸಚಿವರಾದ, ಶೋಭಾ ಕರಂದ್ಲಾಜೆ, ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ನವೆಂಬರ್ 15 ರಂದು, ಬೆಳಗ್ಗೆ 9 ಗಂಟೆಯಿಂದ, ಮಹಾಲಕ್ಷ್ಮೀ ಲೇಔಟ್ ನ ಕುರುಬರ ಹಳ್ಳಿಯಿಂದ, ಶ್ರೀ ಶಂಕರ ಮಠದ ವರೆಗೆ, ಏಕತಾ ಯಾತ್ರೆ ನಡೆಯಲಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.